ಈ) ಖಾಲಿ ಹುದ್ದೆಗಳನ್ನು ಮುಖ್ಯ ಪಟ್ಟಿಯಿಂದ ದೊರೆಯುವ ಅಭ್ಯರ್ಥಿಗಳಿಂದ ತುಂಬಲಾಗುವುದು. ಬಾಕಿ ಇರುವ ಖಾಲಿ ಹುದ್ದೆಗಳು ಹಾಗೂ ಮುಂದೆ ಉಂಟಾಗುವ ಖಾಲಿ ಹುದ್ದೆಗಳನ್ನು ಹೆಚ್ಚುವರಿ ಪಟ್ಟಿಯಲ್ಲಿ ದೊರೆಯುವ ಅಭ್ಯರ್ಥಿಗಳಿಂದ ತುಂಬಲಾಗುವುದು.

ಅಧ್ಯಕ್ಷರು : ಪಟ್ಟಿಯನ್ನು ಮಂಡಿಸಲಾಯಿತು. ಈಗ ಅರ್ಜಿಗಳನ್ನೊಪ್ಪಿಸುವುದು. ಶ್ರೀ ಕೆ. ಕುಶಾಲ ಅವರು. ಮಾನ್ಯ ಸದಸ್ಯರು ಗೈರುಹಾಜರಿದ್ದರು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನನ್ನ ಹೆಸರಿನಲ್ಲಿರುವ ಈ ಕೆಳಕಂಡ ಅರ್ಜಿಯನ್ನು ಈ ಸದನಕ್ಕೆ ಒಪ್ಪಿಸುತ್ತೇನೆ. ಬೆಳಗಾವಿ ಜಿಲ್ಲೆ, ರಾಯಬಾಗ್ ತಾಲ್ಲೂಕಿನ ಕುಡ್‌ಚೀ ಟೌನ್‌ನಲ್ಲಿ ಪ್ರಥಮದರ್ಜೆ ಶಾಲಾ ಕಟ್ಟಡ ಕಟ್ಟುವ ಬಗ್ಗೆ.

ಅಧ್ಯಕ್ಷರು : ಅರ್ಜಿಯನ್ನೊಪ್ಪಿಸಲಾಯಿತು. ಈಗ ಗಮನಸೆಳೆಯುವ ಸೂಚನೆ - ಶ್ರೀ ಚಂದ್ರೇಗೌಡರೇ, ನಿಮ್ಮ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ ಸಹಕಾರ ಸಚಿವರು ಊರಲ್ಲಿಲ್ಲದಿರುವುದರಿಂದ, ಅವರು ಬಂದ ನಂತರ ಇದನ್ನು ತೆಗದುಕೊಳ್ಳೋಣ.

ಒಬ್ಬ ಮಾನ್ಯ ಸದಸ್ಯರು : ಇಂದಿನ ಪಟ್ಟಿಯಲ್ಲಿ ನಮ್ಮ ಪ್ರಶ್ನೆಗಳಿದ್ದರೂ ನಮ್ಮನ್ನು ಕರೆಯಲಿಲ್ಲ.

ಒಬ್ಬ ಮಾನ್ಯ ಸದಸ್ಯರು : ಸ್ವಾಮಿ ಕಾಲಿಂಗ್ ಅಟೆನ್‌ಷನ್ನಾಗಲಿ 334 ಆಗಲಿ ಒಂದೂ ಬರುತ್ತಾ ಇಲ್ಲ. ಇದಕ್ಕೆ ತಾವೇನಾದರೂ ವ್ಯವಸ್ಥೆ ಮಾಡಬೇಕು.

ಶ್ರೀ ಎನ್. ಚಿಕ್ಕೇಗೌಡ : ನಾನು ಒಂದು ಗಮನ ಸೆಳೆಯುವ ಸೂಚನೆ ಕಳಿಸಿದ್ದೆ. ನನ್ನ ಕ್ಷೇತ್ರದಲ್ಲಿ ಮಂಡಲ ಪ್ರಧಾನರೊಬ್ಬರ ಮನೆಯಲ್ಲಿ ಇರುವುದನ್ನೆಲ್ಲ ಲೂಟಿ ಮಾಡಿ ಅವನನ್ನೂ ಊರಿಂದ ಓಡಿಸಿರುವ ವಿಚಾರದ ಬಗ್ಗೆ ಕೇಳಿದ್ದೇ ಈ ಬಗ್ಗೆ ಪೋಲಿಸರು ನಿಸ್ಸಹಾಯಕರಾಗಿದ್ದಾರೆ. ಅವರ ಆಸ್ತಿಪಾಸ್ತಿ ನಷ್ಟವಾಗಿದೆ. ಇದು ಬಹಳ ಗಹನವಾದ ವಿಚಾರದವಾದ್ದರಿಂದ ಅದನ್ನು ಕಳಿಸಿದ್ದೆ. ಇನ್ನೂ ಪಾರ್ಲಿಮೆಂಟ್ ಎಲೆಕ್ಷನ್ ಆಗೇ ಇಲ್ಲ. ಆಗಲೇ ಲೂಟಿ ದರೋಡೆ ನಡೆಯುತ್ತಿದೆ. ಮಾನ್ಯ ಗೃಹಮಂತ್ರಿಗಳು ಇಲ್ಲೇ ಇದ್ದಾರೆ. ಅವರ ಗಮನಕ್ಕೆ ಇದನ್ನು ತಂದು ನಷ್ಟ ಪೀಡಿತರಿಗೆ ರಕ್ಷಣೆ ಕೊಡಬೇಕೆಂದು ಮತ್ತು ಇದನ್ನು ನಾಳೆ ಆದರೂ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರ ಅಪ್ಪಣೆಮೇರೆಗೆ ಪ್ರಸ್ತಾಪಿಸಲಾದ ವಿಷಯ

1. ಪ್ರಜಾವಾಣಿ ಪತ್ರಿಕೆಯಲ್ಲಿ ಪಕ್ಷೇತರ ಸದಸ್ಯರನ್ನು ಕಾಂಗ್ರೆಸ್ ಸದಸ್ಯರೆಂದು ಪ್ರಕಟವಾಗಿರುವುದು.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಇವತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ಕಾಂಗ್ರೆಸ್ ಸದಸ್ಯ ಎಂದು ಬರೆಯಲಾಗಿದೆ. ಇದನ್ನು ನೋಡಿದ ನೂರಾರು ಜನ ಫೋನ್ ಮಾಡಿ ಇದು ನಿಜವೇ ಯಾವಾಗ ಕಾಂಗ್ರೆಸ್ ಸೇರಿದ್ರಿ ಎಂದು ಕೇಳುತ್ತಿದ್ದಾರೆ. ನಾನು ಈ ಸದನದಲ್ಲಿ ಪಕ್ಷೇತರ ಸದಸ್ಯ ಆಗಿದ್ದೇನೆ. ಈಗ ನಾನು ಹಕ್ಕುಚ್ಯುತಿಯನ್ನು ಸರ್ಕಾರದ ವಿರುದ್ಧ ತರಬೇಕೇ ಅಥವಾ ಪತ್ರಿಕೆಯವರ ಮೇಲೆ ತರಬೇಕೇ ಎನ್ನುವ ಬಗ್ಗೆ ದೊಡ್ಡ ಜಿಜ್ಞಾಸೆ ಆಗಿ ಬೆಳಿಗ್ಗೆಯಿಂದ ಬಹಳ ಚಿಂತೆ ಮಾಡುತ್ತಿದ್ದೇನೆ. ಈ ಪತ್ರಿಕೆಯ ಮುಖಪುಟದಲ್ಲಿ ಕಾಂಗ್ರೆ ಸದಸ್ಯ ವಾಟಾಳ್ ನಾಗರಾಜ್ ಎಂದು ವರದಿ ಆಗಿದೆ.